
REVIEW OF RESEARCH
ISSN: 2249-894X
IMPACT FACTOR : 5.7631(UIF)
VOLUME - 15 | ISSUE - 10 | JULY - 2026

# ಭಾರತದಲ್ಲಿ ಪಕ್ಷಾಂತರ ನಿಷೇಧ ಕಾಯ್ದೆ

ಡಾ ನಾಗರಾಜ ಹಾವಿನಾಳ
Associate Professor ,GFGC Alwandi.

## ಪ್ರಸ್ತಾವನೆ




ಭಾರತದ ರಾಜಕೀಯ ವ್ಯವಸ್ಥೆಯಲ್ಲಿ ಪಕ್ಷಾಂತರ ರಾಜಕೀಯವು ಒಂದು ಕವಿ ಸತ್ಯ ನಾಲ್ಕನೇಯ ಸಾರ್ವತ್ರಿಕ ಲೋಕಸಭೆ ಚುನಾವಣೆ ನಂತರ (1967) ಪಕ್ಷಾಂತರ ಪದ್ಧತಿಯು ದೇಶದ ಎಲ್ಲ ರಾಜಕೀಯ ಪಕ್ಷಗಳಲ್ಲಿ ಕಾಣಿಸಿತು. ಈ ಪಕ್ಷಾಂತರ ಅನಿಷ್ಟ ಪದ್ಧತಿಯಿಂದ ಕೇಂದ್ರ ಸರಕಾರ ಅಷ್ಟೆ ಅಲ್ಲದೆ ಹಲವು ರಾಜ್ಯ ಸರಕಾರಗಳು ಬಲಿಯಾದವು.' ರಾಜಕೀಯ ಕ್ಷೇತ್ರದಲ್ಲಿ ರಾಜಕಾರಣಿಗಳನ್ನು ಆಕರ್ಷಿಸುವ ಶಕ್ತಿ ಎಂದರೆ ಅಧಿಕಾರ, ಅಧಿಕಾರಕ್ಕಾಗಿ ವ್ಯಕ್ತಿಗಳ ನಡುವೆ ಹೋರಾಟ, ಕಚ್ಚಾಟ, ಗುಂಪುಗಾರಿಕೆ, ಸ್ವಾರ್ಥಭಾವನೆ ಮುಂತಾದವುಗಳು ಉಂಟಾಗುತ್ತವೆ. ಅಧಿಕಾರ ಅಥವಾ ಇನ್ನಿತರ ಆಸೆಗಾಗಿ ತಮ್ಮ ಪಕ್ಷವನ್ನು ತ್ಯಜಿಸಿ ಬೇರೆ ಪಕ್ಷವನ್ನು ಸೇರುವುದು ಭಾರತದ ರಾಜಕೀಯದಲ್ಲಿ ಒಂದು ಮುಖ್ಯ ವೃತ್ತಿಯಾಗಿಬಿಟ್ಟಿದೆ. ಮೇಲೆ ತಿಳಿಸಿದಂತೆ ಪಕ್ಷಾಂತರ ಪಿಡುಗು 1967 ರಿಂದ 1984ರವರೆಗೆ ಬಹಳವಾಗಿತ್ತು ನಂತರ ಇದರ ತೀವ್ರತೆ ಕಡಿಮೆಯಾಯಿತು.

## ಪಕ್ಷಾಂತರದ ಅರ್ಥ

'ಪಕ್ಷಾಂತರ' ಎಂಬ ಪದವನ್ನು ಎಲ್ಲ ವಲಯಗಳಲ್ಲಿ ಬಳಸುತ್ತಾರೆ. ಆದರೆ ಇಲ್ಲಿ ರಾಜಕೀಯ ಅಥವಾ ಪಕ್ಷ ವ್ಯವಸ್ಥೆಗೆ ಮಾತ್ರ ಸೀಮಿತಗೊಳಿಸಲಾಗಿದೆ.

'ಪಕ್ಷಾಂತರ' ಎಂಬ ಪದವನ್ನು ಇಂಗ್ಲೀಷಿನಲ್ಲಿ "Floor Crossing', 'Corpet Crossing'. Political turn Coatism or Defection ಎಂದು ಕರೆಯಲಾಗುತ್ತದೆ. ಸಾಮಾನ್ಯ ಸಭೆಯಲ್ಲಿ ಆಡಳಿತ ಪಕ್ಷದ ಸದಸ್ಯರು ಮತ್ತು ವಿರೋಧ ಪಕ್ಷದ ಸದಸ್ಯರು ಎದುರು ಬದರು ಕುಳಿತುಕೊಳ್ಳುವಂತೆ ಮಾಡಿರುವುದರಿಂದ, ಸದಸ್ಯರು ಒಂದು ಕಡೆಯಿಂದ ಮತ್ತೊಂದು ಕಡೆಗೆ ಹೋದರೆ ಅದನ್ನು ಫ್ಲೋರ್ ಕ್ರಾಸಿಂಗ್ ಎಂದು ಇಂಗ್ಲೀಷಿನಲ್ಲಿ ಕರೆಯುತ್ತಾರೆ. ಅಂದರೆ ವಿರೋಧ ಪಕ್ಷದವರು ಆಡಳಿತ ಪಕ್ಷವನ್ನು ಸೇರಿದರೆ ಅಥವಾ ಆಡಳಿತ ಪಕ್ಷದವರು ವಿರೋಧ ಪಕ್ಷವನ್ನು ಸೇರಿದರೆ ಅದನ್ನು ಫ್ಲೋರ್ ಕ್ರಾಸಿಂಗ್ ಎನ್ನಲಾಗುತ್ತದೆ. ನೈಜೆರಿಯಾದಲ್ಲಿ ಪಕ್ಷಾಂತರವನ್ನು ಕಾರ್ಪೆಟ್ ಕ್ರಾಸಿಂಗ್ ಎನ್ನಲಾಗುತ್ತದೆ. ನೈಜೆರಿಯಾ ದೇಶದ ಸಂಸತ್ತಿನಲ್ಲಿ ಆಡಳಿತ ಮತ್ತು ವಿರೋಧ ಪಕ್ಷಗಳಿಗೆ ಪ್ರತ್ಯಕವಾಗಿ ಕಾರ್ಪೆಟಗಳನ್ನು ಹಾಕಿರುತ್ತಾರೆ ಒಂದು ವೇಳೆ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷದ ಯಾರಾದರೂ ಜೊತೆಗೂಡಿ ಅವರೆಡೆಗೆ ಹೋದರೆ ಅದನ್ನು ಸೂಚಿಸಲು ಪಕ್ಷಾಂತರವನ್ನು ಕಾರ್ಪೆಟ್ ಕ್ರಾಸಿಂಗ್ ಎನ್ನುಲಾಗುತ್ತದೆ. ಭಾರತದಲ್ಲಿ ಡಿಫೆಕ್ಷನ್ ಎಂಬ ಪದ ಬಹಳ ಬಳಕೆಯಲ್ಲಿದೆ. ಮಿಲಿಟರಿ ಅರ್ಥದಲ್ಲಿ ಡಿಫೆಕ್ಷನ್ ಎಂದರೆ

ಕರ್ತವ್ಯದಿಂದ ಸೈನಿಕನು ಓಡಿ ಹೋಗುವುದು ಎಂದಾಗುತ್ತದೆ.' ಅಥವಾ ಗಂಭೀರ ರಾಜಕೀಯ ಭಿನ್ನಾಭಿಪ್ರಾಯಗಳಿಂದ, ಸರಕಾರದ ಶಿಕ್ಷೆಯ ಭಯದಿಂದ

ಒಬ್ಬ ವ್ಯಕ್ತಿ ತನ್ನ ದೇಶದಿಂದ ಬೇರೆ ದೇಶಕ್ಕೆ ಪಲಾಯನ ಮಾಡುವುದು ಕೂಡಾ ಡಿಫೆಕ್ಷನ್ ಎಂದಾಗುತ್ತದೆ.

ಡಿಫೆಕ್ಷನ್ ಅಥವಾ ಪಕ್ಷಾಂತರದ ಎಂಬ ಪದಕ್ಕೆ ರಾಜಕೀಯ ತಜ್ಞ ಸುಭಾಷ ಸಿ. ಕಶ್ಯಪ್‌ರವರು ಈ ಕೆಳಗಿನಂತೆ ರಾಜಕೀಯ ಅರ್ಥವಿವರಣೆ ನೀಡಿದ್ದಾರೆ.

1. ವಿಶಾಲ ಅರ್ಥದಲ್ಲಿ ಪಕ್ಷಾಂತರವೆಂದರೆ ನಾಯಕನನ್ನು ಅಥವಾ ಪಕ್ಷವನ್ನು ಅಥವಾ ಗುಂಪನ್ನು ತೊರೆಯುವುದು:
2. ತನ್ನ ಪಕ್ಷಕ್ಕೆ ರಾಜೀನಾಮೆ ಕೊಟ್ಟು, ಪಕ್ಷೇತರನಾಗಿ ಮುಂದುವರೆಯುವುದು:
3. ಚುನಾವಣೆಯಲ್ಲಿ ಪಕ್ಷೇತರನಾಗಿ ಗೆದ್ದು, ನಂತರ ಬೇರೆ ಪಕ್ಷವನ್ನು ಸೇರುವುದು;
4. ಚುನಾವಣೆಯಲ್ಲಿ ಒಂದು ಪಕ್ಷದ ಅಭ್ಯರ್ಥಿಯಾಗಿ ಗೆದ್ದು, ನಂತರ ಬೇರೆ ಪಕ್ಷವನ್ನು ಸೇರುವುದು;
5. ಶಾಸಕಾಂಗದಲ್ಲಿ ಮೂಲಭೂತ ವಿಷಯಗಳ ಮೇಲೆ ಮತ ಚಲಾಯಿಸುವಾಗ ಪಕ್ಷಕ್ಕೆ ರಾಜೀನಾಮೆ ಕೊಡದೆ, ಪಕ್ಷದ ಆದೇಶವನ್ನು ಉಲ್ಲಂಘಿಸಿ ತನಗೆ ಇಷ್ಟ ಬಂದಂತೆ ಮತ ಚಲಾಯಿಸುವುದು.'

ಕೆಲವು ಸಂದರ್ಭಗಳಲ್ಲಿ ವಿವಿಧ ಕಾರಣಕ್ಕಾಗಿ ಕೆಲವರು ಪಕ್ಷಬಿಟ್ಟು, ಬೇರೆ ಯಾವುದೇ ಪಕ್ಷಕ್ಕೆ ಹೋಗದೆ ಪಕ್ಷೇತರನಾಗಿ ಉಳಿದು ಬಿಡುತ್ತಾರೆ. ಇದನ್ನು ಆತ್ಮಸಾಕ್ಷಿಗೆ ಅನುಸಾರವಾಗಿಯೂ ಮಾಡಬಹುದು. ಪಾರ್ಟಿಯನ್ನು ಬಿಟ್ಟು ಪಕ್ಷೇತರನಾಗಿ ಉಳಿದರು.

1968ರ ವೈ.ಬಿ. ಚವ್ಹಾಣ ಸಮಿತಿ ಪ್ರಕಾರ ಒಂದು ಪಕ್ಷದ ಚಿಹ್ನೆಯಿಂದ ಆಯ್ಕೆಯಾದ ಸದಸ್ಯ ತನ್ನ ಸ್ವಂತ ಇಚ್ಛೆ ಮೇರೆಗೆ ಪಕ್ಷದ ಸಂಬಂಧವನ್ನು ಕಳೆದುಕೊಂಡರೆ ಅದು ಪಕ್ಷಾಂತರವಾಗುತ್ತದೆ.

ಒಟ್ಟಿನಲ್ಲಿ ಹೇಳುವುದಾದರೆ ವಿವಿಧ ಕಾರಣಗಳಿಗಾಗಿ ಒಬ್ಬ ವ್ಯಕ್ತಿ ಒಂದು ಪಕ್ಷವನ್ನು ತ್ಯಜಿಸಿ ಇನ್ನೊಂದು ಪಕ್ಷಕ್ಕೆ ಸೇರುವುದು ಪಕ್ಷಾಂತರವಾಗುತ್ತದೆ. ಇಲ್ಲಿ ನಿಷ್ಠೆಯ ಅಂಶ ಪ್ರಮುಖವಾಗುತ್ತದೆ. ಇತ್ತೀಚೆಗೆ ಮೌಲ್ಯ, ಸಿದ್ಧಾಂತಗಳಿಗಿಂತ ಅಧಿಕಾರ, ವೈಯಕ್ತಿಕ ಲಾಭಗಳಿಗೊಸ್ಕರವೇ ಪಕ್ಷಾಂತರಗಳಾಗಿರುವುದು ಕಂಡುಬರುತ್ತದೆ.

## ಪಕ್ಷಾಂತರ ನಿಷೇದ ಕಾಯ್ದೆಯ ಹಿನ್ನೆಲೆ

ಪಕ್ಷಾಂತರ ನಿಷೇದ ಕಾಯ್ದೆಯು 1985ರಲ್ಲಿ ಜಾರಿಗೆ ಬಂದರು ಕೂಡಾ, ಈ ಮೊದಲು ಇದನ್ನು ಅನುಷ್ಠಾನಕ್ಕೆ ತರಲು ಸಾಕಷ್ಟು ಪ್ರಯತ್ನಿಸಲಾಗಿತ್ತು. ಸುಪ್ರೀಂಕೋರ್ಟಿನ ಮುಖ್ಯ ನ್ಯಾಯಾಧೀಶರಾದ ಶ್ರೀ ಪಿ.ಬಿ. ಗಜೇಂದ್ರಗಡಕರ್ ಅವರು, ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಗೆ ರಾಜಕೀಯ ಪಕ್ಷಾಂತರವು ಅತ್ಯಂತ ವಿನಾಶಕಾರಿ ಎಂದು ಎಚ್ಚರಿಸಿದರು. ಇದೇ ಅವಧಿಯಲ್ಲಿ ಹಲವು ಲೋಕಸಭೆ ಸದಸ್ಯರು, ರಾಜಕೀಯ ನಾಯಕರು, ವಿವಿಧ ರಾಜ್ಯಗಳ ವಿಧಾನ ಸಭೆ ಮತ್ತು ಮೇಲ್ಮನೆ ಸದಸ್ಯರು, ಪಕ್ಷಾಂತರಕ್ಕೆ ವಿರೋಧ ವ್ಯಕ್ತಪಡಿಸಿ, ಪ್ರಜಾಪ್ರಭುತ್ವದ ಏಳಿಗಾಗಿ ಇದನ್ನು ನಿಲ್ಲಿಸಬೇಕು ಎಂದು ಮನವಿ ಮಾಡಿದರು, ಅಂದಿನ ಕೇಂದ್ರ ಸರಕಾರವು ಡಿಸೆಂಬರ್, 1967 ರಲ್ಲಿ ಲೋಕಸಭೆಯಲ್ಲಿ ಒಂದು ಗೊತ್ತುವಳಿಯನ್ನು ಮಂಡಿಸಿತು ಇದರ ಪ್ರಕಾರ ಪಕ್ಷಾಂತರ ತಡೆಯಲು ಮತ್ತು ಅದರ ಕುರಿತು ಶಿಫಾರಸ್ಸು ನೀಡಲು ಗೃಹಮಂತ್ರಿ ಶ್ರೀ ವೈ.ಬಿ. ಚವ್ಹಾಣ ನೇತೃತ್ವದಲ್ಲಿ ಒಂದು ಸಮೀತಿ ಅಸ್ತಿತ್ವಕ್ಕೆ ಬಂದಿತು. (ಮಾರ್ಚ 21, 1968) ಈ ಸಮಿತಿಯು ಸುಮಾರು 6 ಸಭೆಗಳನ್ನು ನಡೆಸಿ ಪಕ್ಷಾಂತರ ಮತ್ತು ಅದಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಶಿಫಾರಸ್ಸುಗಳ ವರದಿಯನ್ನು ಕೇಂದ್ರ ಸರಕಾರಕ್ಕೆ ಒಪ್ಪಿಸಿತು. ಆದರೆ ಕಾನೂನಿನ ಮೂಲಕ ಪಕ್ಷಾಂತರ ನಿಷೇಧದ ಕುರಿತು ಶಿಫಾರಸ್ಸನ್ನು ಈ ಸಮಿತಿ ಮಾಡಲಿಲ್ಲ.

## ಪ್ರಮುಖ ಶಿಫಾರಸ್ಸುಗಳು

- ಎಲ್ಲ ರಾಜಕೀಯ ಪಕ್ಷಗಳು ಒಂದು ಸಾಮಾನ್ಯ ನೀತಿ ಸಂಹಿತೆ ಅಳವಡಿಸಿಕೊಂಡು ಪಕ್ಷಾಂತರಿಗಳನ್ನು ತಮ್ಮ ಪಕ್ಷಕ್ಕೆ ಸೇರಿಸಿಕೊಳ್ಳ ಬಾರದು.
- ಪ್ರತಿಯೊಬ್ಬ ಆಯ್ಕೆಯಾದ ಪ್ರತಿನಿಧಿಯು ತಾನು ಯಾವ ಪಕ್ಷದ ಚಿಹ್ನೆ ಅಡಿಯಲ್ಲಿ ಚುನಾಯಿತನಾಗಿರುವನೇ ಅಲ್ಲಿಯೇ ಮುಂದುವರೆಯಬೇಕು.
- ಪ್ರಧಾನಮಂತ್ರಿ ಮತ್ತು ಮುಖ್ಯಮಂತ್ರಿಯ ಆಯ್ಕೆಯಲ್ಲಿ ಕೆಳಮನೆಯ ಸದಸ್ಯರುಗಳು ಕಡ್ಡಾಯವಾಗಿ ಹಾಜರಿರಬೇಕು.
- ಪಕ್ಷಾಂತರಿಗಳನ್ನು ಮಂತ್ರಿಗಳನ್ನಾಗಿ ನೇಮಿಸಬಾರದು.
- ಪಕ್ಷೇತರರನ್ನು ಆಯ್ಕೆಮಾಡದಂತೆ ಸಾರ್ವಜನಿಕರನ್ನು ಹುರಿದುಂಬಿಸುವುದು.

ಈ ಮೇಲಿನ ಸಮಿತಿಯ ಶಿಫಾರಸ್ಸುಗಳ ಹೇರಲಾಗಿಯೂ ಪಕ್ಷಾಂತರವನ್ನು ತಡೆಯುವ ಸಲುವಾಗಿ, ಕೇಂದ್ರ ಸರಕಾರವು ಪಕ್ಷಾಂತರ ನಿಷೇಧ ಕಾಯ್ದೆಯನ್ನು (32 ನೇ ತಿದ್ದುಪಡಿ ಮಸೂದೆ) ಮೇ 16, 1973 ರಂದು ಲೋಕಸಭೆಯಲ್ಲಿ ಮಂಡಿಸಿತು. ಮಸೂದೆಯ ಮುಖ್ಯ ಉದ್ದೇಶ ಸಂಸದರು ಮತ್ತು ಶಾಸಕರು ಪಕ್ಷದ ಆದೇಶ ಮತ್ತು ವಿಪ್ ಉಲ್ಲಂಘಿಸುವುದನ್ನು ತಡೆಯುವುದಾಗಿತ್ತು. ಕೆಲವು ದಿನಗಳ ನಂತರ ಮಸೂದೆಯನ್ನು ವಿಸ್ತ್ರತವಾಗಿ ಪರೀಕ್ಷಿಸಲು ಸಂಸತ್ತಿನ ಜಂಟಿ ಸಮೀತಿಗೆ ಒಪ್ಪಿಸಲಾಯಿತು. ಈ ಸಮೀತಿಯು ಸುಮಾರು 53 ಸಭೆಗಳನ್ನು ನಡೆಸಿದರೂ ಕೂಡಾ ತನ್ನ ವರದಿಯನ್ನು ಸಿದ್ಧಪಡಿಸಲಿಲ್ಲ ದುರಾದೃಷ್ಟವಶಾತ್ 1977 ರಲ್ಲಿ ಆರನೇ ಲೋಕಸಭೆ ವಿಸರ್ಜನೆಯಾದ ನಂತರ ಈ ಮಸೂದೆಯು ರದ್ದಾಯಿತು."

ಮಾರ್ಚ್, 1977ರಲ್ಲಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಜನತಾ ಪಕ್ಷದ ಸರಕಾರವು ಪಕ್ಷಾಂತರವನ್ನು ನಿಷೇಧಿಸಲು ಒಂದು ಶಾಸನವನ್ನು ರೂಪಿಸಲು ನಿರ್ಧರಿಸಿತು. ನಂತರ 32ನೇ ತಿದ್ದಪಡಿ ಮಸೂದೆಯನ್ನು ಹೋಲುವ ಇನ್ನೊಂದು ಪಕ್ಷಾಂತರ ನಿಷೇದ ಕಾಯ್ದೆಯನ್ನು ಸಿದ್ಧಪಡಿಸಿತು.'" 1978ರಲ್ಲಿ ಕೇಂದ್ರ ಸರಕಾರವು ಈ ಮಸೂದೆಯನ್ನು ಸದನದಲ್ಲಿ ಮಂಡಿಸಿತು. ಆದರೆ ಅದೇ ಪಕ್ಷದ ಮಧುಲಿಮಯೆ, ಎಸ್.ಎನ್. ಮಿಶ್ರಾ, ರಬಿರಾಯ್, ಶ್ರೀಮತಿ ಮರಿನಲ್ ಗೋರೆ, ಮುಂತಾದವರು ಪಕ್ಷದ ಆಂತರಿಕ

ಪ್ರಜಾಪ್ರಭುತ್ವ ದಮನ ಮಾಡಲಾಗುತ್ತಿದೆ ಎಂದು ಈ ಮಸೂದೆಯನ್ನು ವಿರೋಧಿಸಿದರು. ಈ ಎಲ್ಲ ಕಾರಣಗಳಿಂದಾಗಿ ಜನತಾ ಸರಕಾರವು ಅಗಸ್ಟ 28, 1978 ರಂದು ಈ ಮಸೂದೆಯನ್ನು ಹಿಂದಕ್ಕೆ ಪಡೆಯಿತು.

## ಪಕ್ಷಾಂತರ ನಿಷೇಧ ಕಾಯ್ದೆ 1985

ಪಕ್ಷಾಂತರವನ್ನು ನಿಷೇಧಿಸಲು ಎಷ್ಟೆ ಕಾನೂನಾತ್ಮಕ ಪ್ರಯತ್ನಗಳು ಹಾಗೂ ಶಾಸನೀಯ ಪ್ರಯತ್ನಗಳು ನಡೆದರೂ ಅದು ಕೈ ಗೂಡಲಿಲ್ಲ. ಆದರೆ ಶ್ರೀ ರಾಜೀವ ಗಾಂಧಿ ನೇತೃತ್ವದ ಕಾಂಗ್ರೆಸ್ (ಐ) ಸರಕಾರ ಪಕ್ಷಾಂತರವನ್ನು ನಿಷೇಧಿಸಲು ದೃಢವಾಗಿ ನಿರ್ಧರಿಸಿತು. ಇದರ ಫಲಿತಾಂಶ ಎಂಬಂತೆ ಜನೇವರಿ 24, 1985 ರಂದು 'ಪಕ್ಷಾಂತರ ನಿಷೇದ' ಮಸೂದೆಯನ್ನು ಲೋಕ ಸಭೆಯಲ್ಲಿ ಮಂಡಿಸಿತು. ಲೋಕಸಭೆ ಈ ಮಸೂದೆಗೆ ತನ್ನ ಒಪ್ಪಿಗೆಯನ್ನು ಚರ್ಚೆಯ ಬಳಿಕ ಸೂಚಿಸಿತು. ನಂತರ ಮೇಲ್ಮನೆ ರಾಜ್ಯ ಸಭೆಯು ಜನೇವರಿ 31, 1985 ರಂದು ತನ್ನ ಒಪ್ಪಿಗೆಯನ್ನು ನೀಡಿತು. ಇದರ ಪ್ರಕಾರ ಸಂವಿಧಾನಕ್ಕೆ 52ನೇಯ ತಿದ್ದಪಡಿಮಾಡಿ, 10ನೇ ಅನುಸೂಚಿಯನ್ನು ಸೇರಿಸಿ ಪಕ್ಷಾಂತರವನ್ನು ನಿಷೇಧಿಸಲಾಯಿತು. ಈ ಪಕ್ಷಾಂತರ ನಿಷೇಧ ಕಾಯ್ದೆಯು ಅಧಿಕೃತವಾಗಿ ಮಾರ್ಚ 1, 1985 ರಂದು ಜಾರಿಗೆ ಬಂದಿತು. ಈ ಕಾಯ್ದೆಯು ದೇಶದ ರಾಜಕೀಯ

ಇತಿಹಾಸದಲ್ಲಿಯೇ ಒಂದು ಮೈಲುಗಲ್ಲು ಎಂದು ಹೇಳಬಹುದು. ಏಕೆಂದರೆ ಪ್ರಜಾಪ್ರಭುತ್ವದ ಗಟ್ಟಿತನವನ್ನು ಉಳಿಸಿಕೊಳ್ಳಲು ಇದು ಸಹಾಯವಾಯಿತು ಎನ್ನಲಾಗಿದೆ.

1985 ರ ಪಕ್ಷಾಂತರ ನಿಷೇಧ ಕಾಯ್ದೆಯ ಪ್ರಕಾರ ಸಂಸತ್ತಿನ ಅಥವಾ ರಾಜ್ಯಶಾಸಕಾಂಗದ ಸದಸ್ಯ ಈ ಕೆಳಗಿನ ಕಾರಣಗಳಿಂದ ಅನರ್ಹಗೊಳ್ಳುತ್ತಾನೆ.

- ಯಾವ ಪಕ್ಷದ ಟಿಕೇಟ ಪಡೆದು ಚುನಾವಣೆಯಲ್ಲಿ ಆಯ್ಕೆ ಆಗಿರುತ್ತಾನೊ, ಆ ಪಕ್ಷಕ್ಕೆ ರಾಜೀನಾಮೆ ಕೊಟ್ಟಾಗ ಅಥವಾ ಪಕ್ಷದ ಆದೇಶವನ್ನು ಸಂಸತ್ತಿನ ಮತದಾನ ಸಂದರ್ಭದಲ್ಲಿ ಉಲ್ಲಂಘಿಸಿದಾಗ,
- ಪಕ್ಷದ ಅನುಮತಿ ಇಲ್ಲದೆ ಸಂಸತ್ತಿನ ಪ್ರಮುಖ ಮತದಾನ ಪ್ರಕ್ರಿಯೆಯಲ್ಲಿ ಗೈರು ಹಾಜರಾದರೆ, (ಗೈರು ಹಾಜರಾದ 15 ದಿನದೊಳಗೆ ಸಕಾರಣ ನೀಡಿದರೆ ಅನರ್ಹತೆಯಿಂದ ತಪ್ಪಿಸಿಕೊಳ್ಳಬಹುದು.)
- ಯಾವುದೇ ಸದನಕ್ಕೆ ಆಯ್ಕೆಯಾದ ಪಕ್ಷೇತರ ಸದಸ್ಯ, ಬೇರೆ ಪಕ್ಷವನ್ನು ಸೇರಿದರೆ, ಸದಸ್ಯತ್ವದಿಂದ ಅನರ್ಹಗೊಳ್ಳತ್ತಾನೆ. ಆದರೆ ಒಂದು ಪಕ್ಷದಲ್ಲಿ ಒಡಕು ಉಂಟಾಗಿ ಶಾಸಕಾಂಗ ಪಕ್ಷದ ಸದಸ್ಯರಲ್ಲಿ 1/3 ಭಾಗದಷ್ಟು ಸದಸ್ಯರು ಬೇರೆಯಾದರೆ ಇವರಿಗೆ ಪಕ್ಷಾಂತರ ನಿಷೇಧ ಕಾಯ್ದೆಯ ಅನರ್ಹತೆ ಅನ್ವಯಿಸುವುದಿಲ್ಲ ಮತ್ತು ಎರಡು ಅಥವಾ ಎರಡಕ್ಕಿಂತ ಹೆಚ್ಚು ಪಕ್ಷಗಳು ವಿಲೀನಗೊಳ್ಳಲು ಒಂದು ಗೊತ್ತುವಳಿಯನ್ನು ಮಾಡಿಕೊಂಡು ಶಾಸಕಾಂಗದ 2/3 ಭಾಗದಷ್ಟು ಸದಸ್ಯರು ಇದನ್ನು ಒಪ್ಪಿದರೆ 'ಪಕ್ಷಾಂತರ ನಿಷೇಧ ಕಾಯ್ದೆ' ಅನ್ವಯವಾಗುವುದಿಲ್ಲ ರಾಜಕೀಯ ಪಕ್ಷವೆಂದು ಸದಸ್ಯನನ್ನು ಅಶಿಸ್ತಿನ ಕಾರಣಕ್ಕಾಗಿ ಪಕ್ಷದಿಂದ ಅಮಾನತ್ತು ಮಾಡಿದರೆ ಆ ಸದಸ್ಯನ ಸದಸ್ಯತ್ವ ಅನರ್ಹವಾಗುವುದಿಲ್ಲ.

ಪಕ್ಷಾಂತರ ನಿಷೇಧ ಕಾಯ್ದೆಯಿಂದ ದೇಶದ ರಾಜಕೀಯ ಇತಿಹಾಸದಲ್ಲಿ ಶಿಸ್ತು ಮೂಡತೊಡಗಿತು. ಆದರೂ ಈ ಕಾಯ್ದೆಗೆ ಕೆಲವು ಬದಲಾವಣೆಗಳ ಅವಶ್ಯಕತೆ ಇತ್ತು. ಈ ಕಾರಣದಿಂದ ಕೇಂದ್ರ ಸರಕಾರ 2003ರಲ್ಲಿ ಸಂವಿಧಾನಕ್ಕೆ 91ನೇ ತಿದ್ದುಪಡಿಮಾಡಿ ಕೆಲವು ಬದಲಾವಣೆಗಳ ಮೂಲಕ ಈ ಕಾಯ್ದೆಯನ್ನು ಜಾರಿಗೊಳಿಸಿತು. ಪ್ರಸ್ತುತ ಈ ಕಾಯ್ದೆಯ ನಿಯಮಗಳು ಈ ಕೆಳಗಿನಂತೆ ಇವೆ.

## ರಾಜಕೀಯ ಪಕ್ಷಗಳ ಸದಸ್ಯರುಗಳು

- ಸದನದ ಸದಸ್ಯ ತಮ್ಮ ಪಕ್ಷದ ಸದಸ್ಯತ್ವವನ್ನು ತ್ಯಜಿಸಿದರೆ, ಅಥವಾ
- ಸದನದ ಮತದಾನ ಪ್ರಕ್ರಿಯೆಯಲ್ಲಿ ತನ್ನ ಪಕ್ಷದ ಪೂರ್ವಾನುಮತಿ ಇಲ್ಲದೆ ಮತ ಚಲಾಯಿಸಿದರೆ, ಅಥವಾ ಮತಚಲಾಯಿಸಲು ಗೈರು ಹಾಜರಾದರೆ (ಪಕ್ಷದ ಅನುಮತಿ ಪಡೆದಿದ್ದರೆ ಇದು ಅನ್ವಯಿಸುವುದಿಲ್ಲ) ಅಥವಾ
- ಒಂದು ಪಕ್ಷದ ಟಿಕೇಟ್ ಪಡೆದು ಚುನಾವಣೆಯಲ್ಲಿ ಆಯ್ಕೆಯಾಗಿ ಬೇರೆ ಪಕ್ಷ ಸೇರಿದರೆ ಪಕ್ಷಾಂತರ ನಿಷೇಧ ಕಾಯ್ದೆ ಅನ್ವಯ ಇವರ ಸದಸ್ಯತ್ವವು ಅನರ್ಹವಾಗುತ್ತದೆ.

## ನಾಮಕರಣಗೊಂಡ ಸದಸ್ಯರುಗಳು

ಸಂಸತ್ತಿನ ಸದನಗಳಿಗೆ ಅಥವಾ ರಾಜ್ಯ ವಿಧಾನ ಸಭೆ ಅಥವಾ ವಿಧಾನಪರಿಷತ್‌ಗೆ ನಾಮಕರಣಗೊಂಡ ಸದಸ್ಯರುಗಳು ಆರು ತಿಂಗಳುಗಳ ನಂತರ ಬೇರೆ ಯಾವುದೇ ರಾಜಕೀಯ ಪಕ್ಷಕ್ಕೆ ಸೇರಿದರೆ ಅವರ ಸದಸ್ಯತ್ವ ಅನೂರ್ಜಿತವಾಗುತ್ತದೆ.

## ಪಕ್ಷೇತರ ಸದಸ್ಯರುಗಳು

ಪಕ್ಷೇತರರನಾಗಿ ಸದನಕ್ಕೆ ಆಯ್ಕೆಯಾದ ಸದಸ್ಯ ಬೇರೆ ರಾಜಕೀಯ ಪಕ್ಷವನ್ನು ಸೇರಿದರೆ ಪಕ್ಷಾಂತರ ಕಾಯ್ದೆ ಅನ್ವಯ ಅಂತವರ ಸದಸ್ಯತ್ವ ಅನರ್ಹವಾಗುತ್ತದೆ.

ಪಕ್ಷಗಳ ವಿಲೀನಕ್ಕೆ ಪಕ್ಷಾಂತರ ನಿಷೇಧ ಕಾನೂನು ಅನ್ವಯವಾಗುವುದಿಲ್ಲ ಮೂರನೇ ಎರಡಕ್ಕೆ ಕಡಿಮೆ ಇಲ್ಲದಂತೆ ಪಕ್ಷದ ಶಾಸಕಾಂಗ ಸದಸ್ಯರು ವಿಲೀನಕ್ಕೆ ಒಪ್ಪಿಗೆ ಕೊಡಬೇಕು. 1985ರ ಪಕ್ಷಾಂತರ ಕಾಯ್ದೆ ನಿಯಮ ಪಕ್ಷದ ಮೂರನೇ ಒಂದರಷ್ಟು ಸದಸ್ಯರು ಪಕ್ಷವನ್ನು ತ್ಯಸಿಸಿದರೆ ಅದು ಕೇವಲ ಒಡಕು ಪಕ್ಷಾಂತರವಲ್ಲ ಎಂಬ ನಿಯಮವನ್ನು ಈ 91ನೇ ತಿದ್ದುಪಡಿ ಮೂಲಕ ತೆಗೆದು ಹಾಕಲಾಗಿದೆ.

ಲೋಕಸಭೆ ಮತ್ತು ವಿಧಾನಸಭೆಯ ಸಭಾಪತಿ ಉಪಸಭಾಪತಿ, ರಾಜ್ಯಸಭೆಯ ಡೆಪ್ಯೂಟಿ ಚೇರಮನ್ ಸ್ಥಾನಗಳಿಗೆ ಆಯ್ಕೆಯಾಗುವುದಕ್ಕೆ ಮೊದಲು ಸದಸ್ಯರುಗಳು ಸ್ವ ಇಚ್ಛೆಯಿಂದ ಪಕ್ಷಕ್ಕೆ ರಾಜೀನಾಮೆ ಕೊಟ್ಟರೆ ಅದು ಪಕ್ಷಾಂತರವಾಗುವುದಿಲ್ಲ. ಈ ಶಾಸನದ ಪ್ರಕಾರ ಸದಸ್ಯರುಗಳನ್ನು ಅನರ್ಹಗೊಳಿಸುವ ಅಧಿಕಾರ ಸಭಾಪತಿಗಳಿಗೆ ಇರುತ್ತದೆ. ಒಂದು ವೇಳೆ ಇವರ ಬಗ್ಗೆ ಪಕ್ಷಾಂತರದ ಆರೋಪ ಬಂದರೆ ಸಂಬಂಧಪಟ್ಟ ಸದನದ ಸದಸ್ಯರೊಬ್ಬರಿಗೆ ಪಕ್ಷಾಂತರದ ವಿಷಯ ಒಪ್ಪಿಸಿ ಅವರು ನೀಡುವ ತೀರ್ಪು ಅಂತಿಮವಾಗಿರುತ್ತದೆ. ಪಕ್ಷಾಂತರ ನಿಷೇಧ ಕಾನೂನಿನ ಬಗ್ಗೆ ವಿಚಾರಣೆ ಮಾಡಲು ಯಾವುದೇ ನ್ಯಾಯಾಲಯಕ್ಕೆ ಅಧಿಕಾರವಿಲ್ಲ ಎಂದು ಈ ಶಾಸನ ತಿಳಿಸುತ್ತದೆ. ಆದರೆ 1993ರಲ್ಲಿ 'ರೆಹೊಟೊ ಹಾಲೊಹಾನ್' ಕೇಸ್ ನಲ್ಲಿ ಸುಪ್ರೀಂಕೋರ್ಟ ಇದನ್ನು ತಳ್ಳಿಹಾಕಿ ಇದು ಕೂಡಾ ನ್ಯಾಯಾಲಯದ ವ್ಯಾಪ್ತಿಗೆ (ನ್ಯಾಯಾಂಗೀಯ ಮರುಪರಿಶೀಲನೆ) ಬರುತ್ತದೆ ಎಂದು ತೀರ್ಪು ನೀಡಿತು. 14 ಇಂತಹುದೆ ಪ್ರಕರಣದಲ್ಲಿ ಕರ್ನಾಟಕದ 11 ಜನ ವಿಧಾನಸಭೆ ಸದಸ್ಯರುಗಳ ಅನರ್ಹತೆಯನ್ನು 2013ರಲ್ಲಿ ಸುಪ್ರೀಂಕೋರ್ಟ ತಪ್ಪು ಎಂದು ತೀರ್ಪು ನೀಡಿದ್ದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.

ಮೊದಲಬಾರಿಗೆ ಪಕ್ಷಾಂತರ ನಿಷೇಧ ಕಾಯ್ದೆಯನ್ನು ಬಳಸಿ 1986 ರಂದು ಪುದುಚೇರಿಯ ಎ.ಐ.ಎ.ಡಿ.ಎಂ.ಕೆ. ಪಕ್ಷಕ್ಕೆ ರಾಜೀನಾಮೆ ಕೊಟ್ಟ ಕೆ. ಅನ್‌ಬಳಗನ್ ಮತ್ತು ಎಂ.ಎ.ಎಸ್. ಸುಬ್ರಮಣಿಯನ್ ಅವರನ್ನು ಸಭಾಪತಿ ಅನರ್ಹಗೊಳಿಸಿದರು. 5 ಮೇ 5, 1987 ರಂದು ಪಂಜಾಬ ವಿಧಾನ ಸಭೆಯ ಸಭಾಪತಿ 11 ಮಂದಿ ಭಿನ್ನಮತೀಯ ಅಕಾಲಿದಳ ಪಕ್ಷದ ಶಾಸಕರ ಸದಸ್ಯತ್ವವನ್ನು ರದ್ದುಪಡಿಸಿದರು. ಮಿಜೋರಾಮ್ ಲೋಕಸಭಾ ಕ್ಷೇತ್ರದಿಂದ ಕಾಂಗ್ರೆ ಅಭ್ಯರ್ಥಿಯಾಗಿ ಆಯ್ಕೆಯಾಗಿದ್ದ ಲಾಲ್ ದುಹೋಮ್ ಪಕ್ಷಕ್ಕೆ ರಾಜೀನಾಮೆ ಕೊಟ್ಟ ಮೇಲೆ ಅವರನ್ನು ಲೋಕಸಭೆ ಸ್ಪೀಕರ್ ಅನರ್ಹಗೊಳಿಸಿದ್ದರು. ಜನೇವರಿ 11, 1991 ರಂದು ಪಕ್ಷಾಂತರದ ಕಾರಣದಿಂದ ಜನತಾದಳ (ಎಸ್)ನ ಐವರು ಸಚಿವರನ್ನು ಲೋಕಸಭೆ ಸಭಾಪತಿ ಅನರ್ಹಗೊಳಿಸಿದರು. ಮಧ್ಯಪ್ರದೇಶ ರಾಜ್ಯದಲ್ಲಿ ಜನತಾದಳ (ಎಸ್) ನಿಂದ ಆಯ್ಕೆಯಾಗಿ ಕಾಂಗ್ರೆ ಪಕ್ಷಕ್ಕೆ ಸೇರಿದ 6 ಮಂದಿ ವಿಧಾನಸಭೆ ಸದಸ್ಯರುಗಳನ್ನು ಸಭಾಪತಿಗಳು ಅನರ್ಹಗೊಳಿಸಿದರು." ಅಷ್ಟೆ ಅಲ್ಲದೆ ಕರ್ನಾಟಕದ ಪಕ್ಷೇತರ ಮತ್ತು ಭಾರತೀಯ ಜನತಾ ಪಕ್ಷದ 11 ವಿಧಾನ ಸಭೆ ಸದಸ್ಯರುಗಳನ್ನು ಸಭಾಪತಿ ಕೆ.ಜಿ. ಬೋಪಯ್ಯನವರು 2011ರಲ್ಲಿ ಅನರ್ಹಗೊಳಿಸಿದ್ದರು.

## ಉಪಸಂಹಾರ

ಭಾರತದ ಪ್ರಜಾಪ್ರಭುತ್ವವನ್ನು ಅಣಕಿಸುವ ಈ ಒಂದು ಕೆಟ್ಟ ಪಕ್ಷಾಂತರ ಪದ್ಧತಿಯನ್ನು ನಿಷೇಧಿಸಿರುವುದು ಶ್ಲಾಘನೀಯ. ಆದರೆ ಪಕ್ಷಗಳ ವಿಲೀನವನ್ನು ಈ 'ಪಕ್ಷಾಂತರ ನಿಷೇಧ ಕಾಯ್ದೆ' ಗೆ ಒಳಪಡಿಸದೇ ಇರುವುದನ್ನು ಬಹಳ ಜನ ಟೀಕಿಸಿದ್ದಾರೆ. ಶಾಸಕಾಂಗದ ಹೊರಗೆ ನಡೆಸುವ ಚಟುವಟಿಕೆಗಳೂ ಸಹ ಈ ಕಾಯ್ದೆಗೆ ಒಳಪಟ್ಟಿಲ್ಲ. ಪಕ್ಷಾಂತರದಿಂದಾದ

ಸದಸ್ಯನ ಅನರ್ಹತೆ ವಿಚಾರವನ್ನು ಯಾವ ಕೋರ್ಟಿನಲ್ಲಿಯೂ ಪ್ರಶ್ನಿಸಬಾರದೆಂಬ ವಿಚಾರವು ಸಹ ಟೀಕೆಗೆ ಒಳಗಾಗಿದೆ ಮತ್ತು ಇದನ್ನು ಬಹುತೇಕ ಹೈಕೋರ್ಟ ಮತ್ತು ಸುಪ್ರೀಂ ಕೋರ್ಟಗಳು ಒಪ್ಪಿಲ್ಲ.

ಒಂದು ಪಕ್ಷದ ತತ್ವಗಳ ಮತ್ತು ಕಾರ್ಯಕ್ರಮಗಳನ್ನು ಗೌರವಿಸುವುದು ಮತ್ತು ಅನುಸರಿಸುವುದು ಆ ಪಕ್ಷದ ಸದಸ್ಯರುಗಳ ಜವಾಬ್ದಾರಿ ಯಾಗಿರುತ್ತದೆ. ಪಕ್ಷಾಂತರ ನಿಷೇಧದಿಂದ ವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆ ಉಂಟಾಗುತ್ತದೆ ಎಂಬುದು ಬಹುತೇಕ ತಪ್ಪು. ಪಕ್ಷಾಂತರ ನಿಷೇಧ ಕಾಯ್ದೆ ಅನ್ವಯ ರಾಜಕೀಯ ಕ್ಷೇತ್ರದಲ್ಲಿ ಶಿಸ್ತು ಮತ್ತು ನಿಷ್ಠೆಯನ್ನು ಉಂಟು ಮಾಡಬಹುದು. ಆದರೆ ಸಭಾಧ್ಯಕ್ಷರು ಒಂದು ಪಕ್ಷದಿಂದ ಬಂದವರಾಗಿರುತ್ತಾರೆ. ಅಂತವರಿಗೆ ಅನರ್ಹತೆಯ ಅಂತಿಮ, ಅಧಿಕಾರ ಕೊಟ್ಟಿರುವುದು ಕೂಡಾ ಪ್ರಜಾಪ್ರಭುತ್ವಕ್ಕೆ ಸ್ವಲ್ಪ ಹಿನ್ನೆಡೆಯಾಗಬಹುದು.

## ಆಕರ ಗ್ರಂಥಗಳು

1. Ghai K. K.: "Indian Government and Politics" Kalyani Publishers, Ludhiana, 2010 P-496
2. Kashyap Subhash C. "The Politics of Defection: A case study of state politics in India. National Publication. 1967 P-11 and 12